ಹೇಗೆಂದರೆ ಇವರ ಸೀಡ್ ಅಂಗಡಿಯಲ್ಲಿ ನಾನು ಕೆಲಸ ಮಾಡುತ್ತಿದ್ದೆ. ಇವರಿಬ್ಬರು ನನಗೆ ದೊಡ್ಡ ಬೆನ್ನೆಲುಬು ಇದ್ದ ಹಾಗೆ. ನಿರ್ಭಯಾನಂದರು ಆಧ್ಯಾತ್ಮಿಕವಾಗಿ ಗುರುಗಳು, ಲೌಕಿಕವಾಗಿ ಸುಭಾಷ್ ಸಾಸ್ವೆಹಳ್ಳಿಯವರು.

ನಾನು ಡಿಗ್ರಿ ಪರೀಕ್ಷೆ ಮುಗಿಸಿ ರಾತ್ರಿ ಧಾರವಾಡ ಹಾಸ್ಟೆಲ್‌ನಲ್ಲಿ ಮಲಗಿದ್ದೆ. ಐ.ಪಿ.ಎಸ್. ಪರೀಕ್ಷೆ ಎದುರಿಸಲು ಹೋಗಿದ್ದು ಪ್ಲಾನ್ಡ್ ಅಲ್ಲ. 20 ನಿಮಿಷ ಮೊದಲು ಟ್ರೈನ್ ಹೊರಡಲು ಇದ್ದಂತಹ ಸಮಯದಲ್ಲಿ ಹೈದರಾಬಾದ್‌ಗೆ ಹೋಗಬೇಕು ಅನಿಸಿಬಿಡ್ತು. ಜೇಬಲ್ಲಿ 3000 ಇತ್ತು. ಒಂದು ಕ್ವಿಂಟಲ್ ಬುಕ್ ಎತ್ತಿಕೊಂಡು ರಾಯಲ್‌ಸಿಂಹ ಟ್ರೈನ್‌ನಲ್ಲಿ ಹೈದರಾಬಾದ್‌ಗೆ ಹೋದೆ. ಅಲ್ಲಿಂದ ಒಂದು ಯು.ಪಿ.ಎಸ್.ಸಿ. ಸೆಂಟರ್‌ಗೆ ಹೋಗಲು ಆಟೋದವನನ್ನು ಹಣ ಕೇಳಿದೆ. ಎಷ್ಟು ಆಗುತ್ತೆ ಅಂತ. ಅದಕ್ಕವನು 40 ರೂ.ಗಳು ಎಂದ. ಆಗ ನಾನು ಒಂದು ಕ್ವಿಂಟಲ್ ಬುಕ್ಕನ್ನು ತಲೆಮೇಲೆ ಹೊತ್ತುಕೊಂಡು ಒಂದು ಸೆಂಟರ್‌ಗೆ ಹೋದೆ. ಆ ಸೆಂಟರ್ ಯಾಕೋ ಇಷ್ಟವಾಗಲಿಲ್ಲ. ಹಾಗಾಗಿ ಮತ್ತೆ ಅಲ್ಲಿಂದ ಕನ್ನಡಿಗರು ಎಲ್ಲಿ ಜಾಸ್ತಿ ವಾಸ ಮಾಡ್ತಾರೆ ಅಂತ ಹರಕು ಮುರುಕು ಹಿಂದಿಯಲ್ಲಿ ಕೇಳಿ ಗಾಂಧಿನಗರಕ್ಕೆ ಬಂದೆ. ಅಲ್ಲಿಗೆ ಹೋಗಿ ಸ್ವಲ್ಪ ಹೊತ್ತು ನಿಂತೆ. ನಾನು ನಿಂತ ಪಕ್ಕದ ಮನೆಯಿಂದ 3 ಹುಡುಗರು ಬಂದರು. ಅವರು ಕನ್ನಡಿಗರಾಗಿದ್ದರು. ನಾನು ಅವರ ಮುಂದೆ ನನ್ನ ಕಥೆಯನ್ನು ಹೇಳಿದೆ. ನನಗೆ ಏನೂ ಗೊತ್ತಿಲ್ಲ. ಸ್ವಲ್ಪ ಸಹಾಯ ಮಾಡಿ ಅಂದೆ. ಆಗ ಅವರು ಇಲ್ಲಿ ಒಂದು ಟಾರ್ಗೆಟ್ ಅಂತ ಒಂದು ಸೆಂಟರ್ ಇದೆ. ಅಲ್ಲಿಗೆ ಹೋಗು ಅಂತ ಹೇಳಿದ್ರು. ಆಗ ತಾನೆ ಆ ಸೆಂಟರ್ ಹೊಸದಾಗಿ ಪ್ರಾರಂಭವಾಗಿತ್ತು. ನಾನು ಅಲ್ಲಿನ ಜನರ ಹತ್ತಿರ ಮಾತನಾಡಿಸಿ ನೀವು ಏನೇ ಕೆಲಸ ಕೊಟ್ಟರೂ ಮಾಡ್ತಿನಿ. ನೀವು ಮಾತ್ರ ನನಗೆ ಅಡ್ಮಿಷನ್ ಕೊಡಬೇಕು ಅಂತ ಪ್ರಾರ್ಥಿಸಿಕೊಂಡೆ. ಅದಕ್ಕೆ ಅವರು ಸರಿ ನಾಳೆ ಬಾ ಎಂದರು. ನಾನು ಮತ್ತೆ ಗಾಂಧಿನಗರಕ್ಕೆ ಬಂದು ಪರಿಚಯ ಆಗಿದ್ದ ಆ ಮೂವರು ಗೆಳೆಯರ ರೂಮಿನಲ್ಲೇ ಉಳಿದುಕೊಳ್ಳಲು ಅವಕಾಶ ಕೊಡಿ ಎಂದು ಪ್ರಾರ್ಥಿಸಿದೆ. ಅದಕ್ಕವರು ಒಪ್ಪಿದರು. ನಂತರ ನನಗೆ ಆ ಟಾರ್ಗೆಟ್ ಸೆಂಟರ್‌ನಲ್ಲಿ ಓದಲು ಅವಕಾಶ ಸಿಕ್ಕಿತು. ನಾನು ಅಲ್ಲಿನ ಕೆಲಸ ಮಾಡುತ್ತಾ ಯು.ಪಿ.ಎಸ್.ಗೆ ರೆಡಿ ಆಗ್ತಾ ಹೋದೆ. ನನ್ನ ಬ್ಯಾಚ್‌ನಲ್ಲೇ ಇದ್ದಂತಹ ತ್ರಿವೇಣಿ ಎಂಬುವವರ ಪರಿಚಯವಾಯಿತು. ಅವರು ನನಗೆ ಓದಿನಲ್ಲಿ ಸ್ವಲ್ಪ ಸಹಾಯ ಮಾಡತೊಡಗಿದರು. ನಾವಿಬ್ಬರೂ ಜೊತೆಯಲ್ಲಿಯೇ ಓದಲು ಶುರು ಮಾಡಿದೆವು. ಪರೀಕ್ಷೆಯಲ್ಲಿ ನಾನು ಕರ್ನಾಟಕಕ್ಕೆ 703ನೇ ರ್‍ಯಾಂಕಿಂಗ್ ಬಂದೆ. ಆದರೆ ತ್ರಿವೇಣಿಯವರು ಪಾಸ್ ಆಗಲಿಲ್ಲ. ಈಗ ಆ ತ್ರಿವೇಣಿಯೇ ನನ್ನ ಬಾಳ ಸಂಗಾತಿ.



ನನ್ನ ಬಹುತೇಕ ಕನಸುಗಳು ಹಾಗೂ ಇವತ್ತಿನ ನನ್ನ ಗುಣ ಏನು ರೂಪುಗೊಂಡಿದೆಯೋ ಅವೆಲ್ಲ ನನ್ನ ಹೈಸ್ಕೂಲು ಮತ್ತು ಕಾಲೇಜಿನಲ್ಲಿ ರೂಪುಗೊಂಡಂತಹವು. ನಾನು ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದ ಸಂದರ್ಭದಲ್ಲಿ ಸ್ವಾಮಿ ನಿರ್ಭಯಾನಂದ ಸ್ವಾಮೀಜಿಯವರು ಪರಿಚಿತರಾದರು. ಅವರು ನನ್ನ ಆಲೋಚನೆಗೆ ಒಂದು ಒಳ್ಳೆಯ ರೂಪ ಕೊಟ್ರು. ಅವರ ಒಂದು ಮಾರ್ಗದರ್ಶನ ನನ್ನ ಜೀವನದಲ್ಲಿ ದೊಡ್ಡ ಬೆನ್ನೆಲುಬಾಗಿ ಇಂದಿಗೂ ನಿಂತಿದೆ. 12ನೇ ಶತಮಾನದ ಬಸವಣ್ಣನವರ ಸಾಧನೆಯು ನನ್ನ ಪ್ರೇರಣೆಗೆ ಬಲು ದೊಡ್ಡ ದಾರಿ. ನಾನು ಬಸವಣ್ಣನ ಆರಾಧಕ. ಬರೀ ಆರಾಧಕನಲ್ಲ, ಅವರು ಹೇಳಿರುವುದನ್ನೆಲ್ಲ ಪಾಲನೆ ಮಾಡುವ ಹಿಂಬಾಲಕ. ಯಾಕೆಂದರೆ ಹೈಸ್ಕೂಲಿನಲ್ಲಿ ಓದಬೇಕಾದರೆ ನನ್ನ ಪಟ್ಟಣ್ ಸರ್ ಅಂತು ಪ್ರತಿಯೊಂದು ತರಗತಿಯಲ್ಲಿಯೂ ಬಸವಣ್ಣನವರ ಬಗ್ಗೆ ಹೇಳುತ್ತಿದ್ದರು. ಅದು ನನ್ನ ಮನಸ್ಸಿನಲ್ಲಿ ನಾಟಿತು. ಬಸವಣ್ಣ ಅಂದು ಚಿಕ್ಕ ವಯಸ್ಸಿನಲ್ಲಿಯೇ ಏನೆಲ್ಲ ಸಾಧಿಸಿದ್ದರು, ನಾನು ಕೂಡ ಏನಾದರೂ ಮಾಡಬೇಕು ಎನ್ನುವ ಛಲ ದಿನೇ ದಿನೇ ಜಾಸ್ತಿಯಾಗತೊಡಗಿತು. ಅಕಸ್ಮಾತ್ ಏನಾದ್ರೂ ನನ್ನ ಕ್ಲಾಸಿನಲ್ಲಿ ಯಾರಾದರೂ ನನಗಿಂತ ಎರಡು ಮಾರ್ಕ್ಸ್ ಜಾಸ್ತಿ ತೆಗೆದುಕೊಂಡರೆ ನನಗೆ ಯಾಕೆ ಕಮ್ಮಿ ಬಂತು ಅಂತ ನನ್ನನ್ನು ನಾನೇ ಕೇಳಿಕೊಂಡು ರಾತ್ರಿಯೆಲ್ಲಾ ಕೂತು ಓದುತ್ತಿದ್ದೆ. ಮುಂದಿನ ಮಾಸಿಕ ಪರೀಕ್ಷೆಯಲ್ಲಿ ಜಾಸ್ತಿ ತೆಗೆದುಕೊಳ್ಳುತ್ತಿದ್ದೆ. ಹಾಗಾಗಿ ನಾನು ಯಾವುದರಲ್ಲೂ ಸೋಲನ್ನು ಒಪ್ಪಿಕೊಳ್ಳುತ್ತಿರಲಿಲ್ಲ. ಇಷ್ಟೇ ಅಲ್ಲದೆ ನಾನು ಅನೇಕ ಸಾಧಕರ ಪುಸ್ತಕಗಳನ್ನು ಓದುತ್ತಿದ್ದೆ. ಹಾಗೂ ಕೆಲವೊಂದು ವಿಷಯಗಳಲ್ಲಿ ನನಗೆ ನಾನೇ ನಿರ್ಬಂಧಗಳನ್ನು ವಿಧಿಸಿಕೊಳ್ಳುತ್ತಿದ್ದೆ. ಅಂದಿನ ಕೆಲಸ ಅಂದು ಮುಗಿಸಿಯೇ ರಾತ್ರಿ ಮಲಗುತ್ತಿದ್ದೆ. ನನಗೆ ನಾನೇ ಟಾರ್ಗೆಟ್‌ಗಳನ್ನು ಹಾಕಿಕೊಂಡು ಕೆಲಸವನ್ನು ಮಾಡ್ತಾ ಇದ್ದೆ. ಆದರೆ ಯಾವತ್ತೂ ಕೂಡ ಮುಂದಕ್ಕೆ ಇಟ್ಟ ಹೆಜ್ಜೆಯನ್ನು ಹಿಂದಕ್ಕೆ ತೆಗೆದುಕೊಳ್ಳುತ್ತಿರಲಿಲ್ಲ. ಇದರ ಜೊತೆಗೆ ನಾನು ಮನೆಯನ್ನು ಕೂಡ ಗಮನಿಸಬೇಕಾಗಿತ್ತು. ಯಾವತ್ತೂ ನನ್ನ ಓದಿಗೆ ನನ್ನ ಮನೆಯಿಂದ ಹಣವನ್ನು ತೆಗೆದುಕೊಳ್ಳುತ್ತಿರಲಿಲ್ಲ. ಕೊಡಲು ಅವರ ಹತ್ತಿರ ಹಣವು ಇರುತ್ತಿರಲಿಲ್ಲ! ಹಾಗಾಗಿ ನಾನೇ ಕೃಷಿಭೂಮಿಯಲ್ಲಿ ಕೆಲಸ ಮಾಡಿ ಬುಕ್, ಪೆನ್, ಶಾಲೆಯ ಶುಲ್ಕ ಎಲ್ಲವನ್ನೂ ಕಟ್ಟುತ್ತಿದ್ದೆ. 8, 9 ಮತ್ತು 10 ರಿಂದ ಡಿಗ್ರಿತನಕ ಹೋಟೆಲ್‌ಗಳಲ್ಲಿ ಸಪ್ಲೈಯರ್ ಆಗಿ ಕೆಲಸ ಮಾಡಿದೆ. ಥಿಯೇಟರ್‌ಗಳಲ್ಲಿ ಕೆಲಸ ಮಾಡಿದೆ. ಬಾರ್‌ನಲ್ಲಿ ಕೆಲಸ ಮಾಡಿದ. ಯಾಕೆಂದರೆ ಮನೆಯ ಅನಿವಾರ್ಯತೆ.(8,9 ಮತ್ತು 10ನೆ ತರಗತಿ ಓದುವ ಸಮಯದಲ್ಲಿ ಕೃಷಿ ಕೆಲಸ ಮತ್ತು ಕಟ್ಟಡ ನಿರ್ಮಾಣ ಕೆಲಸ) 10ನೆ ತರಗತಿ ನಂತರ ಬಾರ್, ಹೋಟೆಲ್, ಪಾಪರ್ ಮತ್ತು ಗದಗದ ಮಹಾಲಕ್ಷ್ಮಿ ಥಿಯೇಟರ್‌ನಲ್ಲಿ ಟಿಕೆಟ್ ಹರಿಯುವ ಕೆಲಸಕ್ಕೆ ಸೇರಿಕೊಂಡೆ. ವಾಟರ್ ಮ್ಯಾನ್ ಆಗಿಯೂ ಕೆಲಸ ಮಾಡಿದೆ. ಬಹಳಷ್ಟು ಬಾರಿ ಹಸಿವಿನಿಂದ ಶಾಲೆಗೆ ಹೋಗುತ್ತಿದ್ದರೂ ನಾನು ಹೊರಜಗತ್ತಿಗೆ ಅದನ್ನು ತೋರಿಸುತ್ತಿರಲಿಲ್ಲ. ನಾನು ಇನ್ನು 5 ವರ್ಷಕ್ಕೆ ಈ ತರಹ ಆಗಬೇಕು, ಇನ್ನು 10 ವರ್ಷಕ್ಕೆ ಈ ತರಹ ಆಗಬೇಕು ಅಂತ ಯೋಚಿಸಿ ಆದರಂತೆ ಕೆಲಸ ಮಾಡ್ತಾ ಇದ್ದೆ. ನಾನು 4ನೇ ತರಗತಿಯಲ್ಲಿ ಇದ್ದಾಗಲೇ ನನ್ನ ಮನೆ ಮುಂದೆ ಐ.ಪಿ.ಎಸ್. ಕೆಂಪಣ್ಣ ಅಂತ ಬೋರ್ಡ್ ತೂಗು ಹಾಕಿದ್ದವನು ನಾನು.